SRI C. M. ARMUGHAM.—I would like to know when the Municipality has deposited the amount with the PWD and when they have taken up the work?

SRI DHARAM SINGH.—In March 1982 and already they have spent Rs. 41,742-00.

SRI C. M. ARMUGHAM.—What is the length of the road and whether they have repaired only the pit holes or whether they have done chip carpeting?

ಶ್ರೀ ಧರ್ಮಸಿಂಗ್.—ಈಗ ನನ್ನ ರಿಪೋರ್ಟ್ ಪ್ರಕಾರ ಆ ರಸ್ತೆಯ ದುರಸ್ತಿಗೆ ೪೧,೭೪೨ ರೂಪಾಯಿಗಳು ಖರ್ಚಾಗಿದೆ. ಮಾನ್ಯ ಸದಸ್ಯರು ೧೫ ವರ್ಷಗಳಿಂದಲೂ ಕೂಡ ಆ ರಸ್ತೆಯನ್ನು ದುರಸ್ತಿ ಮಾಡಿಲ್ಲಾ ಎಂದು ಹೇಳುತ್ತಾರೆ. ಆದಕ್ಕೆ ಹೇಳಬೇಕಾದರೆ the Hon'ble Member has asked this question in March 1982. After that, I have given instructions in this regard. They have already spent Rs. 41,742. They have repaired that road

SRI C. M. ARMUGHAM.—They have not repaired that road. They only filled the pit-holes. Will the Government direct the Municipality to take up the entire road i.e., opposite to the Mahatma Gandhi Market? Sir, it was lying idle for the past two years and it is only after tabling the question, that they have instructed. Otherwise, they would not have taken that action also. Will the Government atleast now instruct the Municipality to repair the above road as well as the bus-stand road?

ಶ್ರೀ ಧರ್ಮಸಿಂಗ್.—೧೫ ವರ್ಷದಿಂದಲೂ ಆ ರೋಡ್ ಚೆನ್ನಾಗಿರಲಿಲ್ಲ ಎಂದರೆ ನಾವು ಆದಕ್ಕೆ ೪೧,೭೪೨ ರೂಪಾಯಿಗಳು ಏನು ಖರ್ಚ್ ಮಾಡಿದ್ದೇವೋ ಆದು ಮಾನ್ಯ ಆರ್ಮುಗಂ ರವರ ನಿರೀಕ್ಷಣೆಗೆ ತಕ್ಕಂತೆ ಕೆಲಸ ಆಗಲಿಲ್ಲ ಎಂದರೆ ಮತ್ತೆ ನಾನು ಏನಾಗಿದೆ ಅನ್ನುವುದನ್ನು ನೋಡಿ further instructions, definitely, we will give.

SRI A. LAKSHMISAGAR.—It is a very important place in K G F and large number of people visit, in the evening, it is almost impossible to pass through freely. I have had the occasion to visit very recently and condition of the road is far from satisfactory. What steps the Government is going to take to see that the condition of this road is improved?

SRI DHARAM SINGH.—Just now I have replied that we have already spent Rs. 41,742 through the P. W. D. ಆದರೆ ತಾವು ಈಗ ಏನು ಹೇಳಿದ್ದೀರಿ ಪುನ: ನಾನು ಆದರ ಕಂಡಿಷನ್ ನೋಡಿ ಆದರ ಬಗ್ಗೆ ಮುಂದಿನ ಕಾರ್ಯಕ್ರಮ ಏನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

Construction of Hirehalla Project in Koppal taluk.

12 8 SRI V. P. MUDGAL (Koppal).—Will the Minister of State for Major and Medium Irrigation be pleased to state —

(a) the estimated cost of the Project of Hirehalla in Koppal Taluk;

(b) the recurring and non-recurring expenditure met upto this date;

(c) the nature of works executed upto this date?

SRI B. B. CHIMMANAKATTI (Minister of State for Major and Medium Irrigation).—

(a) Rs. 635 lakhs.

(b) The total expenditure incurred upto the end of May 1982 on this project is Rs. 23 07 lakhs. The entire expenditure incurred is to be considered as non-recurring as the Project is still under execution. The break up far the expenditure is as follows

(i)	Establishment	..	Rs. 4.94 lakhs
(ii)	Machinery & Equipment		
	(a) New supplies	...	Rs. 0.77 lakhs
	(b) Repairs & Carriage	...	Rs. 1.88 lakhs
(iii)	Roads & Bridges	..	Rs. 1.57 lakhs
(iv)	Dam & allied works	...	Rs. 13.91 lakhs
	Total	...	Rs. 23.07 lakhs

(c) (1) Trench excavation and filling on left Bank is completed.

(2) Construction of field laboratory is completed.

(3) Purchase of machinery, filling up of key trenches, formation of approach roads and construction of quarters are in progress.

ಶ್ರೀ ವಿ.ಪಿ. ಮುದಗಲ್.—ತಾವು ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ೬೩೫ ಲಕ್ಷ ರೂಪಾಯಿ ಅಂತ ಹೇಳಿದ್ದೀರಿ. ಈಯೋಜನೆಗೆ ೧೯೭೯ ರಲ್ಲಿ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಸಿಕ್ಕಿತ್ತು. ನಮಗೆ ಕೊಟ್ಟಿರುವ Irrigation in Karnataka ಅನ್ನುವ ಬುಕ್‌ನಲ್ಲೂ ಈ ಯೋಜನೆಗೆ ೬೩೫ ಲಕ್ಷ ರೂಪಾಯಿ ಆಗುತ್ತದೆ ಅಂತ ಹೇಳಿದ್ದೀರಿ? ಈಗ ಈ ಯೋಜನೆಯ ವೆಚ್ಚ ರಿವೈಸ್ ಆಗಿದೆಯೇ ಹೇಗೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ,—ಈಗ ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ೯೫೦ ಲಕ್ಷ ರೂಪಾಯಿ ಆಗುತ್ತದೆ.

ಶ್ರೀ ವಿ.ಪಿ. ಮುದಗಲ್.—ಎರಡನೆಯದಾಗಿ ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ೧೯೮೨ನೇ ಮೇ ಅಂತ್ಯದವರೆಗೆ ಈ ಯೋಜನೆಗೆ ವೆಚ್ಚ ಮಾಡಿದ ಮೊಬಲಗು ೨೩.೦೭ ಲಕ್ಷ ರೂಪಾಯಿಗಳು ಅಂತ ಹೇಳಿದ್ದೀರಿ. ನನಗೆ ತಿಳಿದ ಪ್ರಕಾರ ಅಲ್ಲಿಯ ಅಣೆಕಟ್ಟಿಗೆ ಮತ್ತು ಸಂಬಂಧಿಸಿದ ಕಾರ್ಯಗಳಿಗೆ ೧೩ ಲಕ್ಷ ೯೧ ಸಾವಿರ ರೂಪಾಯಿ ಆಗಿದೆ. ನೀವು ಇದಕ್ಕೆ ಕೊಟ್ಟಿರುವ ದುಡ್ಡಿನಲ್ಲಿ ಕೆಲವೇ ಸಾವಿರ ರೂಪಾಯಿಗಳು ಖರ್ಚಾಗಿದೆ. ಈ ಬಗ್ಗೆ ತಾವೇನಾದರೂ ಎನ್‌ಕ್ವೈರಿ ಮಾಡಿಸಿ ಯೋಗ್ಯ ಕ್ರಮ ಕೈಗೊಳ್ಳುತ್ತೀರಾ ಮತ್ತು ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ, ಅವರು ಇಂಜನೀಯರೇ ಆಗಿರಬಹುದು, ಕಂಟ್ರಾಕ್ಟರೆ ಆಗಿರಬಹುದು ಇನ್ನು ಬೇರೆ ಯಾವರೇ ಆಗಿರಬಹುದು ಅವರ ಮೇಲೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೀರಾ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಸ್ವಾಮಿ. ಇದರಲ್ಲಿ ಕ್ಲಿಯರ್ ಆಗೇ ಹೇಳಿದ್ದೇವೆ. ೧೯೮೨ನೇ ಮೇ ಅಂತ್ಯದವರೆಗೆ ಈ ಯೋಜನೆಗೆ ವೆಚ್ಚ ಮಾಡಿದ ಮೊಬಲಗು ೨೩.೦೭ ಲಕ್ಷ ರೂಪಾಯಿಗಳು ಎಂದು.

ಅಲ್ಲದೆ ಈ ೨೩.೦೭ ಲಕ್ಷಕ್ಕೆ ಯಾವ್ಯಾವುದಕ್ಕೆ ಎಷ್ಟೆಷ್ಟು ಖರ್ಚಾಗಿದೆ ಅನ್ನೂವುದನ್ನೂ ಸಹ ಈ ಪ್ರಶ್ನೆಗೆ ಉತ್ತರವಾಗಿ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಇಂಥಾದ್ದರಲ್ಲಿ ಹೀಗೆ ಮಿಸ್‌ಅಪ್ರೊ ಪ್ರಿಯೇಷನ್ ಆಗಿದೆ ಎಂದು ಸ್ಪೆಸಿಫಿಕ್ ಆಗಿ ಹೇಳಿದರೆ ಅವನ್ನು ವಿಚಾರಿಸಬಹುದು, ಆದರಲ್ಲಿ ಏನಾದರೂ ತಪ್ಪು ಕಂಡು ಬಂದರೆ ಅವರ ಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬಹುದು.

ಶ್ರೀ ವಿ.ಪಿ. ಮುಂದಗಲ್.--ತಾವು ಇದರಲ್ಲಿ ಅಣೆಕಟ್ಟು ಹಾಗೂ ಅದಕ್ಕೆ ಸಂಬಂಧಿಸಿದ ಕಾಮಗಾರಿಗಳ ವೆಚ್ಚಕ್ಕೆ ೧೩.೯೧ ಲಕ್ಷ ರೂಪಾಯಿಗಳಾಗಿದೆ ಅಂತ ತಿಳಿಸಿದ್ದೀರಿ. ನನಗೆ ತಿಳಿದ ಮಟ್ಟಿಗೆ ಈ ಅಣೆಕಟ್ಟಿನ ಕೆಲಸಕ್ಕೆ ಅಷ್ಟು ದುಡ್ಡು ವಿಚಾರ್ಗಿಲ್ಲ. ಆದರೆ ಅದರಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಆಗಿದೆ ಅನ್ನುವುದು ಮಾತ್ರ ನನಗೆ ತಿಳಿದಂ ಬಂದಿದೆ. ಆದುದರಿಂದ ಇದರ ಬಗ್ಗೆ ತಮಗೆ ಸಿಬ್ಬಂದಿ ಇಗುವುದರಿಂದ ಸ್ಪೆಸಿಫಿಕ್ ಆಗಿ ತಾವೆ ತಿಳಿದು ಹೇಳಿ ಅಂತ ನಾನು ಈ ಪ್ರಶ್ನೆಯನ್ನು ಹಾಕಿದ್ದು.

ಶ್ರೀ ಬಿ.ಬಿ ಚಿಮ್ಮನಕಟ್ಟಿ.--ಅಧ್ಯಕ್ಷರೇ, ಅದರ ಬಗ್ಗೆ ವಿಚಾರಣೆ ಮಾಡುತ್ತೇನೆ

ಶ್ರೀ ವಿ.ಪಿ. ಮುಂದಗಲ್.--ಮಾನ್ಯ ಮಂತ್ರಿಗಳು ಈ ಪ್ರಾಜೆಕ್ಟ್‌ನಿಂದ ೫ ಸಾವಿರ ಎಕರೆ ಮುಳುಗಡೆಯಾಗುತ್ತದೆ ಅಂತ ಹೇಳಿದ್ದಾರೆ. ಮುಳುಗಡೆ ಆದ ಪ್ರದೇಶದಲ್ಲಿ ಆ ಭೂಮಾಲೀಕರಿಗೆ ಪರಿಹಾರ ಕೊಡದೇ ಇರುವುದರಿಂದ ಅಲ್ಲಿಯ ಪ್ರಾಜೆಕ್ಟ್ ಕನ್‌ಸ್ಟ್ರಕ್ಷನ್ಸ್ ಕೆಲಸ ನಿಂತಿದೆ. ಈ ಒಂದು ವ್ಯವಹಾರ ೩ ವರ್ಷದಿಂದಲೂ ನಡೆಯುತ್ತಾ ಇದೆ. ತಾವು ಅವರಿಗೆ ಸರಿಯಾದ ಪರಿಹಾರ ಹಣವನ್ನು ಕೊಟ್ಟರೆ ಆ ವೈತರಿಂದಾಗಲಿ, ಆ ಭೂಮಾಲೀಕರಿಂದಾಗಲಿ ಯಾವರೀತಿಯಾದ ಅಬ್ಜಕ್ಷನ್ ಬರಲಾರದು, ಆದುದರಿಂದ ಅದರ ಬಗ್ಗೆ ತಾವೇನು ಕಾರ್ಯಕ್ರಮ ಕೈಗೊಳ್ಳುತ್ತೀರಾ ಎನ್ನುವುದನ್ನು ಹೇಳುತ್ತೀರಾ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.--ನಮಗೆ ಲ್ಯಾಂಡ್ ಓನರ್ಸ್ ಅವರಿಂದ ಅಬ್ಜಕ್ಷನ್ ಬಂದರೂ ಕೂಡ ಕಂಪಲ್ಸರಿಯಾಗಿ ಲ್ಯಾಂಡ್ ಆಕ್ವಿಸಿಷನ್ ಪ್ರಕಾರ ಆ ಲ್ಯಾಂಡ್ ಅನ್ನು ತೆಗೆದುಕೊಳ್ಳಲೇ ಬೇಕಾಗುತ್ತದೆ. ಅವರಿಗೆ ತಕ್ಕ ಪರಿಹಾರವನ್ನು ಕೊಡಲೇಬೇಕಾಗುತ್ತದೆ. ಅವರಿಗೆ ಪರಿಹಾರವನ್ನು ಕೊಡತಕ್ಕಂಥಾ ಸಂದರ್ಭದಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಕೊಡಬೇಕು ಅನ್ನುವುದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡುತ್ತೆವೆ.

ಶ್ರೀ ವಿ.ಪಿ ಮುಂದಗಲ್.--ಸ್ವಾಮಿ, ಆ ಲ್ಯಾಂಡ್ ಓನರ್ಸ್‌ದ್ದು ಇದರ ಬಗ್ಗೆ ೩ ವರ್ಷದಿಂದಲೂ ಅಬ್ಜಕ್ಷನ್ಸ್ ಇದೆ. ಅವರಿಗೆ ಸರಿಯಾದ ಕಾಂಪನ್‌ಸೇಷನ್ ಇದುವರೆಗೆ ಕೊಡದೇ ಇರುವುದರಿಂದ ಅಲ್ಲಿ ಕೆಲಸ ನಿಂತುಹೋಗಿದೆ. ೧೯೭೯ರಲ್ಲಿ ಇದಕ್ಕೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಆಗಿದ್ದರೂ ಕೂಡ ಆ ಕೆಲಸ ಆಗದೆ ಈ ಕಾರಣದಿಂದ ನಿಂತುಹೋಗಿದೆ. ಲ್ಯಾಂಡ್ ಆಕ್ವಿಸಿಷನ್ ಅಧಿಕಾರಿಗಳಿಂದ ಈ ಬಗ್ಗೆ ಪ್ರೊಸೀಡಿಂಗ್ಸ್ ಬಂದನಂತರ ಪರಿಶೀಲಿಸುತ್ತೇವೆ ಎಂದರೆ ಅದು ಇನ್ನು ಎಷ್ಟು ವರ್ಷಗಳು ಹಿಡಿಯುತ್ತದೋ ಗೊತ್ತಿಲ್ಲ. ಅವರಿಗೆ ತಕ್ಷಣ ಪರಿಹಾರ ಸಿಕ್ಕುವ ಹಾಗೆ ಯೋಗ್ಯ ವಿಚಾರಣೆ ಮಾಡಿ, ತೀವ್ರವಾಗಿ ತಾವು ಇದನ್ನು ಗಮನಕ್ಕೆ ತೆಗೆದುಕೊಂಡು ಆ ಭೂಮಾಲಿಕರಿಗೆ ನಿಧಾನ ಮಾಡದೆ ಹಣವನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ? ಹೇಗೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.--ಮಾನ್ಯ ಅಧ್ಯಕ್ಷರೇ, ಲಾಂಡ್ ಆಕ್ವಿಸಿಷನ್ ಪ್ರಕಾರ ಪ್ರೊಸೀಡಿಂಗ್ಸ್ ಕಂಪ್ಲೀಟ್ ಆಗದೆ ಕೊಡುವುದಕ್ಕಾಗುವುದಿಲ್ಲ. ಅದೇನಾದರೂ ಒಂದು ಅವಾರ್ಡ್ ಸ್ಟೇಜ್‌ಗೆ ಬಂದರೆ ಏನಾದರೂ ಒಂದು ಪರಿಹಾರ ಕೊಡಬಹುದು. ಈಗ ಹಾಗೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ವಿ.ಪಿ. ಮುಂದಗಲ್.--ಸ್ವಾಮಿ, ತೀವ್ರವಾಗಿ ಕೊಡಿಸುತ್ತೀರಾ?

ಉಪಾಧ್ಯಕ್ಷರು.--ಮಾನ್ಯ ಮಂತ್ರಿಗಳು ಮೊದಲೇ ಹೇಳಿದ್ದಾರಲ್ಲಾ. ಲ್ಯಾಂಡ್ ಆಕ್ವಿಸಿಷನ್ಸ್ ಪ್ರೊಸೀಡಿಂಗ್ಸ್ ಕಾನೂನು ಪ್ರಕಾರ ಮಾಡಬೇಕಾಗಿದೆ. ಅದರಲ್ಲಿ ಅವಾರ್ಡ್ ತೀರ್ಪಿನಿದಸಂತರ ಏನಾದರೂ ಒಂದು ಕ್ರಮ ತೆಗೆದುಕೊಳ್ಳಬಹುದು. ಮತ್ತೆ ಮಂತ್ತೆ ಹೇಳಿದರೂ ತಾವು ಹೀಗೆ ಕೇಳುತ್ತೀರಲ್ಲಾ?

ಶ್ರೀ ಎನ್. ಬಸವಯ್ಯ.--ಸ್ವಾ ೨, ಅವರು ಕೇಳುವುದೇನೆಂದರೆ ಕೆಲವು ಕಡೆ ಲ್ಯಾಂಡ್ ಆಕ್ವಿಸಿಷನ್ ಕೆಲಸ ಇನ್ನೂ ನಡೆಯದೇ ಇದ್ದಾಗಲೇ ಕೆಲವರಿಗೆ ಪರಿಹಾರ ಕೊಟ್ಟಿದ್ದಾರೆ. ಇವರಿಗೆ ಇನ್ನೂ ಪರಿಹಾರ ಕೊಟ್ಟಿಲ್ಲಾ. ಈ ತಾರತಮ್ಯ ಏತಕ್ಕೆ ಮಾಡುತ್ತೀರಿ? ಅವರಿಗೇನಾದನೂ ಹಣ ಕೊಡದೇ ಇರುವುದಕ್ಕೇನಾದರೂ ಈ ರೀತಿಯಾಗಿ ಲ್ಯಾಂಡ್ ಆಕ್ವಿಸಿಷನ್ಸ್ ಕೆಲಸವನ್ನು ಮುಂದೂಡುತ್ತಿದ್ದಾರೋ ಏನೋ ಅದಾಗಬಾರದು ಎಂದು ಹೇಳುತ್ತಿದ್ದಾರೆ.

ಶ್ರೀ ವಿ.ಪಿ. ಮಂದಗಲ್.—ಸ್ವಾಮಿ, ಕೆಲವು ಕಡೆಗಳಲ್ಲಿ ಇನ್ನೂ ಲ್ಯಾಂಡ್ ಅಕ್ವಿಸಿಷನ್ ಕೆಲಸ ಕಂಪ್ಲೀಟ್ ಆಗಿ ನಡೆದಿಲ್ಲಾ. ೧೦೦ಕ್ಕೆ ೯೦ ರಷ್ಟು ಭಾಗಗಳಲ್ಲಿ ಅವರಿಗೆ ಪರಿಹಾರ ಧನವನ್ನು ಕೊಟ್ಟಿದ್ದಾರೆ. ತಾವು ಅದೇರೀತಿಯಾಗಿ ಇವರಿಗೂ ಕೊಟ್ಟರೆ ಆ ರೈತರಿಗೂ ಮತ್ತು ಭೂಮಾಲೀಕರಿಗೂ ಸ್ವಲ್ಪಮಟ್ಟಿಗೆ ಸಮಾಧಾನ ವಾಗುತ್ತದೆ. ಅವರಿಗೆ ಲ್ಯಾಂಡ್ ಅಕ್ವಿಸಿಷನ್ ಅಂದರೆ ಏನು ಅನ್ನುವುದು ಗೊತ್ತಿಲ್ಲ. ಆದುದರಿಂದ ನಾನು ಹೇಳುತ್ತೇನೆ, ಮಾನ್ಯ ಸಚಿವರಿಗೆ ಇದರ ಬಗ್ಗೆ ಪೂರ್ಣ ಮಾಹಿತಿ ಏನು ಅನ್ನುವುದು ಗೊತ್ತಿಲ್ಲ ಅಂತ ಕಾಣುತ್ತದೆ. ಆದುದರಿಂದ ದಯವಿಟ್ಟು ಅವರು ಇದರ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿಕೊಂಡು ಇದಕ್ಕೆ ಸರಿಯಾದ ಉತ್ತರವನ್ನು ಕೊಡಲಿ ಎಂದು ಹೇಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಮಾನ್ಯ ಸದಸ್ಯರು ಈ ಪ್ರಶ್ನೆಯಲ್ಲಿ ಕೇಳಿದ್ದು ಈ ಯೋಜನೆಯ ಕನ್‌ಸ್ಟ್ರಕ್ಷನ್ ಎಕ್ಸ್‌ಪೆಂಡಿಚರ್ ಬಗ್ಗೆ ಕೇಳಿದ್ದಾರೆ. ಅವರು ಲ್ಯಾಂಡ್ ಅಕ್ವಿಸಿಷನ್ ಬಗ್ಗೆ ಕೇಳಿಲ್ಲಾ. ಅದರ ಬಗ್ಗೆ ಕೇಳಿದ್ದರೆ, ಉತ್ತರ ಹೇಳಬಹುದಾಗಿತು. ಈ ಲ್ಯಾಂಡ್ ಅಕ್ವಿಸಿಷನ್‌ನಲ್ಲಿ ಈ ಜಮೀನಿನ ಪರಿಹಾರದ ಬಗ್ಗೆಯೂ ಅಲ್ಲದೆ ಕ್ರಾಪ್ ಕಾಂಪನ್ಸೇಷನ್ ಕೂಡ ಕೊಡಬೇಕಾಗುತ್ತದೆ. ಅದಕ್ಕೆ ನಾವು ಆವರಿಗೆ ಮೊದಲು ಅಡ್ವಾನ್ಸ್ ಇಷ್ಟು ಅಂತ ಕೊಡುತ್ತೇವೆ. ಹಾಗೇನಾದರೂ ಅಡ್ವಾನ್ಸ್ ಕೊಡಬೇಕು ಎಂದರೆ ಅದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೇನೆ. ಈ ವರ್ಷದ ಬಜೆಟ್ ನೋಡಿದರೆ ತಮಗೆ ಗೊತ್ತಾಗುತ್ತದೆ, ಈ ಪ್ರಾಜೆಕ್ಟ್ ಕೆಲಸಕ್ಕೆ ೧೦ ಲಕ್ಷ ರೂಪಾಯಿ ಈ ವರ್ಷ ಒದಗಿಸಿದ್ದೇವೆ. ಇದರ ಹಿಂದಿನ ವರ್ಷ ೨೦ ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಆ ಪ್ರಾಜೆಕ್ಟ್‌ನಲ್ಲಿ ವರ್ಕ್ ನಡೆಯಲು ಆ ಭೂಮಾಲೀಕರಿಗೆ ಅಡ್ವಾನ್ಸ್ ಕೊಡುವ ವ್ಯವಸ್ಥೆ ಮಾಡಿಕೊಡಬೇಕು ಎಂದು ಕೇಳಿದರೆ ಹಾಗೆ ಅಡ್ವಾನ್ಸ್ ಕೊಡುವ ವ್ಯವಸ್ಥೆಯನ್ನು ಮಾಡಿಕೊಡುತ್ತೇನೆ.

ಶ್ರೀ ವಿ.ಪಿ. ಮುದಗಲ್.—ಸ್ವಾಮಿ, ೧೯೮೧-೮೨ ರಲ್ಲಿ ಈ ಪ್ರಾಜೆಕ್ಟ್‌ಗೆ ೨೦ ಲಕ್ಷ ರಪಾಯಿ ಒದಗಿಸಿದ್ದೀರಿ, ೧೯೮೨-೮೩ ರಲ್ಲಿ ನೋಡಿದರೆ ೧೦ ಲಕ್ಷ ರೂಪಾಯಿ ಒದಗಿಸಿದ್ದೀರಿ. ೧೯೮೨-೮೩ಕ್ಕೆ ೧೦ ಲಕ್ಷ ರೂಪಾಯಿ ಹಣವನ್ನು ಒದಗಿಸಿದ್ದೀರಲ್ಲಾ, ಹೋದವರ್ಷಕ್ಕಿತಲೂ ಕಡಿಮೆ ಹಣ ಒದಗಿಸಿದ್ದಿರಲ್ಲಾ ಇದಕ್ಕೆ ಕಾರಣ ಏನು? ೧೯೭೯ ರಲ್ಲಿ ಇದಕ್ಕೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್‌ಆಗಿದೆ. ಆದರೆ ಕೆಲಸ ಇನ್ನೂ ಪೂರ್ಣವಾಗಿ ಆಗಿಲ್ಲಾ, ಇದಕ್ಕೆ ಒದಗಿಸಿರುವ ಹಣವನ್ನೂ ಸಹ ನೋಡಿದರೆ ಬಹಳ ಕಡಿಮೆ. ಇದಕ್ಕೆ ತಾವು ಹೆಚ್ಚು ಹಣವನ್ನು ಒದಗಿಸಬೇಕು. ಏತಕ್ಕೆಂದರೆ ಅತಿ ಮುಖ್ಯವಾದ ಪ್ರಾಜೆಕ್ಟ್ ಈ ಪ್ರಾಜೆಕ್ಟ್‌ನಿಂದ ತುಂಗಭದ್ರಾ ಸಿಲ್ಟ್‌ಗೆಹೋಗುತ್ತದೆ ಆ ಸಿಲ್ಟು ಆರೆಸ್ಟ್ ಆಗಲು ಈ ಪ್ರಾಜೆಕ್ಟ್ ಅನ್ನು ತಯಾರಿಸಿರುವ ಉದ್ದೇಶ. ಇದರಿಂದ ಕೊಪ್ಪಳ್ ತಾಲ್ಲೂಕಿನಲ್ಲಿ ೨೦ ಎಕರೆ ಯಷ್ಟು ಪ್ರದೇಶ ನೀರಾವರಿ ಪ್ರದೇಶವಾಗುತ್ತದೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಮಾನ್ಯ ಆರ್ಥ ಮಂತ್ರಿಗಳೂ ಈ ಸಾರಿ ಬಜೆಟ್ಟಿನಲ್ಲಿಯಾದರೂ ಸ್ವಲ್ಪ ಹೆಚ್ಚು ಹಣ ಒದಗಿಸಿದರೆ ಒಳೆಯದು. ತಾವು ೧೯೮೧-೮೨ ಕ್ಕೆ ೨೦ ಲಕ್ಷ ರೂಪಾಯಿ ಹಣವನ್ನು ಕೊಟ್ಟು ೧೯೮೧-೮೨ಕ್ಕೆ ಇದಕ್ಕೆ ೧೦ ಲಕ್ಷ ರೂಪಾಯಿ ಹಣವನ್ನು ಹೋದ ವರ್ಷಕ್ಕಿಂತಲೂ ಕಡಿಮೆ ಹಣವನ್ನು ಕೊಡುವುದಕ್ಕೆ ಕಾರಣ ಏನು ಅನ್ನುವುದನ್ನು ಹೇಳುತ್ತೀರಾ?

ಶ್ರೀ ಬಿ.ಬಿ. ಚಿಮ್ಮನ ಕಟ್ಟಿ.—ಮಾನ್ಯ ಅಧ್ಯಕ್ಷರೇ, ನಾವು ೧೯೭೮-೭೯ರಲ್ಲಿ ೮ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟಿದ್ದೇವೆ. ಇದರಲ್ಲಿ ೭ ಲಕ್ಷರೂಪಾಯಿಗಳನ್ನು ಖರ್ಚು ಮಾಡಲಾಗಿದೆ ೧೯೭೯-೮೦ರಲ್ಲಿ ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ೧೯೮೦-೮೧ರಲ್ಲಿ ೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ, ೧೯೮೧-೮೨ ರಲ್ಲಿ ೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ, ೧೯೮೨ರಲ್ಲಿ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇದು ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಕಡಿಮೆಯಾಗಿದ್ದರೆ ಮುಂದಿನ ವರ್ಷ ಇನ್ನೂ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.